# ಶ್ರೀರಾಮಕೃಷ್ಣ ಮಹಿಮಾ

ಮೂಲ ಬಂಗಾಳಿ : ಅಕ್ಷಯಕುಮಾರ್ ಸೇನ್
ಕನ್ನಡಾನುವಾದ : ಕೆ.ಎಂ.ಹೆಗಡೆ ಮತ್ತು ಮಂಜುನಾಥ ಭಾಗವತ

## ಜೈ ಗುರುದೇವ

(ಅಕ್ಟೋಬರ್ ಸಂಚಿಕೆಯಿಂದ ಮುಂದುವರಿದುದು)

೨೪೩.ನಾಮಕರಣದ ಸಮಯವದು ಒದಗಿ ಬಂತು ।
ಆ ಬಗೆಗೆ ಯೋಚಿಸಲು ಹೆಸರಿನಾ ಕುರಿತು ॥

೨೪೪.ಖುದಿರಾಮನೆಂದ ಗಯೆಯೊಳು ನಡೆದ ಪರಿಯ ।
ಒದಗಿ ಸ್ವಪ್ನದಿ ಗದಾಧರ ಕಂಡ ಬಗೆಯ ॥

೨೪೫.ಅವನ ಹೆಸರನೆ ಮಗನಿಗಿಡುವೆ ಎನಲು ।
ಶಶಿಮಣಿಯು ಒಡನೆ ಸಮ್ಮತಿಯ ನೀಡಿದಳು ॥

೨೪೬.ನಾಮಕರಣವು ಗದಾಧರನಾದರೇನು ।
ಪ್ರೇಮದಲಿ 'ಗದಾಯ್' ಕರೆದರಾತನನು ॥

೨೪೭.ಶ್ರೀರಾಮಕೃಷ್ಣ ಎಂದೆಂಬ ಅಂಕಿತವು ।
ಗುರುದೇವನಾ ಗುರುವು ತಾನೆ ನೀಡಿದುದು ॥

೨೪೮.ಶ್ರೀರಾಮಕೃಷ್ಣ ಪರಮಹಂಸರೆಂದು ।
ವಿಶ್ವವಿಖ್ಯಾತಿಯನು ಮುಂದೆ ಪಡೆದಿಹರು ॥

೨೪೯.ಆ ಗದಾಧರ ನಾಮ ರಾಮಕೃಷ್ಣಾಖ್ಯೆ ।
ಈ ಎರಡು ಹೆಸರಿಗಿಲ್ಲವು ವೇದವ್ಯಾಖ್ಯೆ ॥

೨೫೦.ಮನುಜಕುಲಕಿದು ಮಹಾವಾಕ್ಯಸಂಪತ್ತು ।
ಭಕ್ತಿಯಾಶ್ರಯಧಾಮ ಮುಕ್ತಿಯಾ ಮುತ್ತು ॥

೨೫೧.ಈ ಹೆಸರಿನಾ ಸೆಳೆತಕೊಳಗಾದ ಜನರು ।
ಪುಣ್ಯವಂತರು ಮಹಾ ಭಾಗ್ಯಶಾಲಿಗಳು ॥

೨೫೨.ಶ್ರೀರಾಮಕೃಷ್ಣರಾಕರ್ಷಣೆಗೆ ಮಣಿದು ।
ಸಲಹೆಂದು ಪ್ರಾರ್ಥಿಸುವೆನನವರತ ನೆನೆದು ॥

೨೫೩.ಭಗವಾನ್ ಗದಾಯ್ ದಯೆದೋರು ನೀನೆನಗೆ ।
ಸೂತ್ರಧಾರಿಯು ನೀನು ಲೀಲಾನಾಟಕಕೆ ॥

೨೫೪.ನಿನ್ನ ದಯೆಯೇ ಗತಿಯು ಮತಿಯು ಇಂದೆನಗೆ ।
ಭಾವನೆಗೆ ಬಲನೀಡಿ ಪಥದೋರು ಕೃತಿಗೆ ॥

೨೫೫.ಹೃದಯದಲಿ ಹುದುಗಿರಲಿ ಸೇವೆಯಾಸಕ್ತಿ ।
ಕಂಠದಲಿ ಮೊಳಗಲ್ಕೆ ಭಜನೆಯಾ ಭಕ್ತಿ ॥

೨೫೬.ನಿನ್ನ ಲೀಲಾಚರಿತೆ ಈ ಪೂರ್ಣಾರ್ಥಿ ಗ್ರಂಥ ।
ಬರೆದೋದಿ ಹಾಡೆ ಬಲ ನೀಡು ಭಗವಂತ ॥

### ಅಧ್ಯಾಯ ೨

### ಶಿವಭಾವ

ಜಯ ರಾಮಕೃಷ್ಣ ವಾಂಛಿತ ಕಲ್ಪತರುವೆ ।
ಜಯ ದೀನ ಬಂಧು ಭಗವಾನ್ ಜಗದ್ಗುರುವೆ ॥

ಜಯ ರಾಮಕೃಷ್ಣರಾಪ್ತೇಷ್ಟ ಬಂಧುಗಳೇ ।
ನಯ ಭಯದಿ ಪಾದಧೂಳಿಯ ಬೇಡುತಿರುವೆ ॥

೨೫೭.ಗುರುದೇವನ ಬಾಲ ಲೀಲೆಯಾ ಕತೆಯು ।
ಗೂಢತೆಗೂ ಗೂಢ ಆಶ್ಚರ್ಯದಾಯಕವು ॥

೨೫೮.ಸುಮಧುರವು ಸಂಗತಿಯ ಕೇಳು ಓ ಮನವೆ ।
ಅಮಿತ ಮಹಿಮಾನ್ವಿತ ಗದಾಧರನ ಚರಿತೆ ॥

೨೫೯.ಅಚ್ಚರಿಯ ಸಾಮರ್ಥ್ಯ ಪ್ರಕಟಿಸುತಲಿರ್ದ ।
ಮುಕ್ಕಣ್ಣನಂತೆ ಧ್ಯಾನದಲಿ ಮೈಮರೆವ ॥

೨೬೦.ಧ್ಯಾನಮಗ್ನನ ಕಣ್ಣು ಮೂರಾಗಿ ಕಂಡು ।
ಭಯವ ತಾಳುವಳಜ್ಜಿ ತಾನು ಭ್ರಮೆಗೊಂಡು ॥

೨೬೧.ಭೂತದಾವಾಹನೆಯೊ ಎನುತ ಭಯದಿಂದ ।
ಭೂತನಾಥನ ಸ್ಮರಿಸುವಳು ಭಕ್ತಿಯಿಂದ ॥

೨೬೨.ಶಿವನ ನಾಮೋಚ್ಚರಣೆ ಕೇಳಿದಾಕ್ಷಣವೆ ।
ಮಗುವು ತಾ ಮೊದಲಿನಂದೊಳಾಟವಾಡೆ ॥

೨೬೩.ಸವಿನೋಟ ಬೀರುತ್ತ ಮೊಲೆಯನುಣ್ಣುತ್ತ ।
ನಗಿಸಿ ನಲಿಸುತ ವರ್ಧಿಸುತ್ತಿರ್ದನಾತ ॥